# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸ್ವಯಂ ಚಾಲಿತ ರೀಲಿಂಗ್ ಯಂತ್ರ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಕಚ್ಚಾ ರೇಷ್ಮೆಗೆ ನೀಡುವ ಪ್ರೋತ್ಸಾಹಧನದ ಕುರಿತು.

**ಓದಲಾಗಿದೆ:**

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ: ಯೋಜನೆ / ಪಿಎಸ್1 / ಎ.ಆರ್.ಎಂ. / ರೇ.ಸ.ಧನ/121/2015-16, ದಿನಾಂಕ 08/09-02-2016 ಮತ್ತು 31-05-2016.

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ 08/09-02-2016 ಮತ್ತು 31-05-2016ರ ಪತ್ರಗಳಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದನೆಯನ್ನು ಪ್ರೋತ್ಸಾಹಿಸಲು 11ನೇ ಪಂಚವಾರ್ಷಿಕ ಯೋಜನೆಯಡಿ ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿಯಲ್ಲಿ ಸ್ವಯಂ ಚಾಲಿತ ನೂಲು ಬಿಚ್ಚಾಣಿಕೆ ಘಟಕಗಳ ಸ್ಥಾಪನೆಗೆ ಶೇ.75ರ ಸಹಾಯಧನ ಮತ್ತು ಅದರಿಂದ ಉತ್ಪಾದನೆಯಾಗುವ ಕಚ್ಚಾ ರೇಷ್ಮೆಗೆ ಗುಣಮಟ್ಟ (ಗ್ರೇಡ್) ಆಧಾರಿತ ಪ್ರತಿ ಕೆಜಿ ನೂಲಿಗೆ ಗರಿಷ್ಠ ರೂ.150-00 ಗಳ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮವನ್ನು ಸರ್ಕಾರದ ಆದೇಶಗಳು ಮತ್ತು CDP ಮಾರ್ಗಸೂಚಿಗಳ ಅನುಸಾರ ಹಮ್ಮಿಕೊಳ್ಳಲಾಗಿದೆ. ಸ್ವಯಂ ಚಾಲಿತ ನೂಲು ಬಿಚ್ಚಾಣಿಕೆ ಘಟಕಗಳ ಅನುಷ್ಠಾನವನ್ನು ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಕೇಂದ್ರ ರೇಷ್ಮೆ ಮಂಡಳಿಯ ತಾಂತ್ರಿಕ ಸಹಯೋಗದೊಂದಿಗೆ ನಿರ್ವಹಿಸಲಾಗಿದೆ. ಪ್ರಸ್ತುತ CDP ಯೋಜನೆಯಡಿ 2008-09ರಿಂದ ಆರಂಭಿಸಿ ರಾಮನಗರ ಮತ್ತು ಚನ್ನಪಟ್ಟಣದಲ್ಲಿ 02 ಘಟಕಗಳ ಸ್ಥಾಪನೆಗೆ ಮಂಜೂರಾತಿ ನೀಡಿ ಅನುದಾನ ಒದಗಿಸಲಾಗಿದೆ. ಈ ಘಟಕಗಳು ಈಗಾಗಲೇ ಸ್ಥಾಪನೆಯಾಗಿ ಕಾರ್ಯಾರಂಭಗೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ನಂತರದಲ್ಲಿ 2012-13, 2013-14, 2014-15 ಹಾಗೂ 2015-16ನೇ ಸಾಲಿನಲ್ಲಿ ಒಟ್ಟು 23 ARM ಘಟಕಗಳ ಸ್ಥಾಪನೆಗೆ CDP ಯೋಜನೆಯಡಿ ಮಂಜೂರಾತಿ ನೀಡಲಾಗಿದೆ. ಹೆಚ್ಚುವರಿಯಾಗಿ 2013-14ನೇ ಸಾಲಿನಲ್ಲಿ ARM ಘಟಕ ಸ್ಥಾಪನೆ ಕಾರ್ಯಕ್ರಮವನ್ನು ರಾಜ್ಯ ಯೋಜನೆಯಡಿಲ್ಲಿಯೂ ಸಹ ಅಳವಡಿಸಿಕೊಂಡು CDP ಮಾನದಂಡಗಳನ್ನು ಅನುಸರಿಸಿ 3 ಘಟಕಗಳನ್ನು ಹಾವೇರಿ, ಮೈಸೂರು ಮತ್ತು ರಾಮನಗರದಲ್ಲಿ ಪ್ರಾರಂಭಿಸಲು ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ. ಒಟ್ಟಾರೆ 400 ಕೊನೆಗಳ 17 ಘಟಕಗಳು, 200 ಕೊನೆಗಳ 7 ಘಟಕಗಳು ಹಾಗೂ 142 ಕೊನೆಗಳ 4 ಡೂಪಿಯಾನ್ ಘಟಕಗಳನ್ನು ಮಂಜೂರು ಮಾಡಲು ಕ್ರಮವಹಿಸಲಾಗಿದೆ. 2015-16ನೇ ಸಾಲಿನಿಂದ ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯು ಸ್ಥಗಿತಗೊಂಡಿದ್ದು ಸದರಿ ಕಾರ್ಯಕ್ರಮವನ್ನು ರಾಜ್ಯ ಯೋಜನೆಯಡಿಯಲ್ಲಿ ಮುಂದುವರೆಸಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ. ಈ ಕಾರ್ಯಕ್ರಮದ ಫಲಶೃತಿಯಿಂದ 400 ಕೊನೆಗಳ (400 Ends) 7 ಘಟಕಗಳು ಮತ್ತು 3 ಡ್ಯೂಪಿಯಾನ್ ಘಟಕಗಳು ಪ್ರಸ್ತುತ ಕಾರ್ಯಾರಂಭಗೊಂಡಿದೆ. 2015-16ನೇ ವರ್ಷಾಂತ್ಯಕ್ಕೆ ಇನ್ನೂ 400 ಕೊನೆಗಳ 2 ARM ಘಟಕಗಳು ಕಾರ್ಯಾರಂಭ ಮಾಡಲಿವೆ. 2016-17ನೇ ಸಾಲಿನ ಅಂತ್ಯಕ್ಕೆ 400 ಕೊನೆಗಳ 8 ARM ಘಟಕಗಳು ಮತ್ತು 200 ಕೊನೆಗಳ 7 ಘಟಕಗಳು ಸ್ಥಾಪನೆಯಾಗಿ ಕಾರ್ಯಾರಂಭ ಮಾಡುವುದನ್ನು ನಿರೀಕ್ಷಿಸಲಾಗಿದೆ.

ARM ಘಟಕ ಸ್ಥಾಪನೆಯಿಂದ ಅಂತರಾಷ್ಟ್ರೀಯ ಗುಣಮಟ್ಟದ ದ್ವಿತಳಿ ನೂಲು ಉತ್ಪಾದಿಸಲು ಸಾಧ್ಯವಾಗಿದೆ. ಇದರಿಂದ ಹೊರ ದೇಶದ ರೇಷ್ಮೆ ಆಮದು ತಗ್ಗಿಸಲು ಸಾಧ್ಯ. ಸ್ವಯಂ ಚಾಲಿತ ನೂಲು ಬಿಚ್ಚಾಣಿಕೆ ಘಟಕಗಳ ಸ್ಥಾಪನೆಯಿಂದ ಉತ್ಪಾದನೆಯಾಗುತ್ತಿರುವ ಕಚ್ಚಾ ರೇಷ್ಮೆ ಗುಣಮಟ್ಟ, ದೊರಕುತ್ತಿರುವ ಧಾರಣೆ, ಕಾರ್ಮಿಕ ಕೊರತೆ ನೀಗಿಸುವಿಕೆ ಮುಂತಾದವುಗಳ ಬಗ್ಗೆ ಅರಿವು ಉಂಟಾಗಿ 12ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯ ರೀಲರುಗಳು ಈ ಘಟಕ ಸ್ಥಾಪನೆಗೆ ಆಸಕ್ತರಾಗಿರುತ್ತಾರೆ.

ಸಿಡಿಪಿ ಯೋಜನೆಯಡಿ ಅರ್ಹ ಸ್ವಯಂ ಚಾಲಿತ ನೂಲು ಬಿಚ್ಚಾಣಿಕಾ ಘಟಕದ ಫಲಾನುಭವಿಗೆ ಕಚ್ಚಾ ರೇಷ್ಮೆ ಉತ್ಪಾದನಾ ಪ್ರೋತ್ಸಾಹಧನವನ್ನು 2014-15ನೇ ಸಾಲಿನವರೆಗೆ ಲೆಕ್ಕಶೀರ್ಷಿಕೆ 2851-00-107-1-35(106)ಯಡಿಯಲ್ಲಿ ವಿತರಿಸಲಾಗಿದೆ. ಒಂದು ARM ಘಟಕದ ಸರಾಸರಿ ವಾರ್ಷಿಕ ನೂಲು ಉತ್ಪಾದನಾ ಸಾಮರ್ಥ್ಯ 33,600 ಕೆಜಿಗಳನ್ನು ಅನುಸರಿಸಿ ಅಂದಾಜು ರೂ.50.00 ಲಕ್ಷ ಪ್ರೋತ್ಸಾಹಧನ ನೀಡಬೇಕಾಗುತ್ತದೆ. ARM ಘಟಕಗಳು ಪ್ರಾರಂಭಿಕ ಹಂತದ ಎಡರು ತೊಡರುಗಳನ್ನು ಯಶಸ್ವಿಯಾಗಿ ನಿಭಾಯಿಸಿ ಘಟಕ ಸ್ಥಾಪನೆಗೆ ಹೂಡಿರುವ ಬಂಡವಾಳದ ಮೊತ್ತವನ್ನು ಈಗಾಗಲೇ ರೇಷ್ಮೆ ನೂಲು ಉತ್ಪಾದನೆ / ವಹಿವಾಟಿನಿಂದ ಪಡೆದುಕೊಂಡಿರುತ್ತಾರೆ ಮತ್ತು ARM ಘಟಕಗಳನ್ನು ಯಶಸ್ವಿಯಾಗಿ ಮುಂದುವರೆಸಲು ಶಕ್ತರಾಗಿರುತ್ತಾರೆ.

2015-16ನೇ ಸಾಲಿನಲ್ಲಿ ಸ್ವಯಂ ಚಾಲಿತ ಯಂತ್ರದಿಂದ ಉತ್ಪಾದಿಸಿದ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ ಕಾರ್ಯಕ್ರಮವನ್ನು ಸಿಡಿಪಿ ಮಾನದಂಡಗಳಂತೆ ರಾಜ್ಯ ಯೋಜನೆ ಲೆಕ್ಕ ಶೀರ್ಷಿಕೆ 2851-00-107-1-48(106)ಅಡಿ ಮುಂದುವರೆಸಲಾಗಿದೆ. ಈ ರೀತಿ ಸ್ಥಾಪನೆಯಾದ ಎಆರ್‌ಎಂ ಘಟಕಗಳಿಗೆ ಪ್ರೋತ್ಸಾಹಧನದ ಪಾವತಿಗೆ ಹೆಚ್ಚಿನ ಅನುದಾನದ ಅಗತ್ಯತೆ ಉಂಟಾಗುತ್ತದೆ. ಪ್ರತಿ 400 ಕೊನೆಗಳ ಪ್ರತಿ ಘಟಕಕ್ಕೆ ಪ್ರತಿ ಮಾಹೆ ರೂ.4.20 ಲಕ್ಷಗಳು ಹಾಗೂ ಪ್ರತಿ 200 ಕೊನೆಗಳ ಪ್ರತಿ ಘಟಕಕ್ಕೆ ಪ್ರತಿ ಮಾಹೆಗೆ ರೂ.2.00 ಲಕ್ಷಗಳು ಪ್ರೋತ್ಸಾಹಧನ ನೀಡಬೇಕಾಗುತ್ತದೆ. ಪ್ರಸ್ತುತ ಮಂಜೂರಾಗಿರುವ ಎಲ್ಲಾ ಘಟಕಗಳು ಸ್ಥಾಪನೆಯಾಗಿ ಕಾರ್ಯಾರಂಭ ಮಾಡಿದಾಗ ಪ್ರತಿ ಮಾಹೆಗೆ ಅಂದಾಜು ರೂ.85.00 ಲಕ್ಷಗಳಂತೆ ವಾರ್ಷಿಕ ರೂ. 1020.00 ಲಕ್ಷಗಳ ಪ್ರೋತ್ಸಾಹಧನ ಅವಶ್ಯಕವಿರುತ್ತದೆ.

ಆದರೆ, ARM ಯಂತ್ರೋಪಕರಣಗಳ ಸ್ಥಾಪನೆ, ನಿರ್ವಹಣೆ ಮತ್ತು ದುಡಿಮೆ ಬಂಡವಾಳಕ್ಕಾಗಿ ಹೆಚ್ಚಿನ ಅನುದಾನದ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾರಂಭಿಕ ನೆರವು ನೀಡುವುದು ಅವಶ್ಯವಿರುತ್ತದೆ. ಸಿಡಿಪಿ ಯೋಜನೆಯಡಿ ಈ ಪ್ರೋತ್ಸಾಹಧನವನ್ನು ಘಟಕ ಸ್ಥಾಪನೆಯ ಸಮಯದಿಂದ ಯಾವ ಅವಧಿಯವರೆಗೆ ನೀಡಬೇಕು ಎನ್ನುವ ಮಾನದಂಡ ಇರುವುದಿಲ್ಲ. ವಿಶೇಷವಾಗಿ ARM ಘಟಕದಿಂದ ಉತ್ಪಾದಿಸುವ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ ಕುರಿತು ಕಾಲ ಮಿತಿ ನಿಗಧಿಪಡಿಸುವುದು ಸೂಕ್ತವಾದ ಕ್ರಮವಾಗಿದೆ. 11ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಪ್ರಾರಂಭಗೊಂಡಿರುವ ಎರಡು ಘಟಕಗಳಲ್ಲಿ ಒಂದು ಘಟಕ ಡಿಸೆಂಬರ್-2015ರ ಮಾಹೆಗೆ ಮತ್ತು ಎರಡನೇ ಘಟಕ ಫೆಬ್ರವರಿ 2016ರ ಮಾಹೆಗೆ 5 ವರ್ಷ ಪೂರೈಸಲಿವೆ.

ಡಾ॥ ಹೆಚ್.ಬಸವರಾಜು ಇವರ ಅಧ್ಯಕ್ಷತೆಯ ತಾಂತ್ರಿಕ ಸಮಿತಿ ವರದಿಯಲ್ಲಿ ಈ ವಿಷಯದ ಕುರಿತು ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನವನ್ನು ಇಲಾಖೆಯ ನಿಯಮಗಳಿಗೆ ಒಳಪಟ್ಟಂತೆ ಮುಂದುವರೆಸುವುದು ಸೂಕ್ತ ಎಂದು ವರದಿಯ ಕಂಡಿಕೆ 10.4.6 ರಲ್ಲಿ

ಮು.ತಿ.ನೋ. . . .

ಅಭಿಪ್ರಾಯಿಸಲಾಗಿದೆ. ಈ ಹಿನ್ನೆಲೆಯಲ್ಲಿ 05 ವರ್ಷ ಪೂರೈಸಿರುವ ಸ್ವಯಂ ಚಾಲಿತ ಘಟಕಗಳಿಂದ ಉತ್ಪಾದಿಸಲಾಗುತ್ತಿರುವ ಕಚ್ಚಾ ರೇಷ್ಮೆಗೆ ನೀಡಲಾಗುತ್ತಿರುವ ಪ್ರೋತ್ಸಾಹಧನವನ್ನು ಸ್ಥಗಿತಗೊಳಿಸುವುದು ಸೂಕ್ತವಿರುತ್ತದೆ ಎಂದು ತಿಳಿಸುತ್ತಾ ಸೂಕ್ತ ಆದೇಶ ಹೊರಡಿಸುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಕೋರಿರುತ್ತಾರೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ರಾಜ್ಯದ ದಕ್ಷಿಣ ಭಾಗದ ಸಾಂಪ್ರದಾಯಕ ರೇಷ್ಮೆ ಜಿಲ್ಲೆಗಳಲ್ಲಿ ಸ್ವಯಂ ಚಾಲಿತ ರೀಲಿಂಗ್ ಘಟಕಗಳಲ್ಲಿ ಉತ್ಪಾದಿಸುವ ಕಚ್ಚಾ ರೇಷ್ಮೆಗೆ ಸ್ವಯಂ ಚಾಲಿತ ರೀಲಿಂಗ್ ಘಟಕ ಸ್ಥಾಪನೆಯಿಂದ 3 ವರ್ಷಗಳವರೆಗೆ ಮಾತ್ರ ಪ್ರೋತ್ಸಾಹಧನ ನೀಡಲು, ಹಾಗೂ ಅಸಾಂಪ್ರದಾಯಕ ನೂತನ ರೇಷ್ಮೆ ಜಿಲ್ಲೆಗಳಾದ ಚಿತ್ರದುರ್ಗ, ಬಳ್ಳಾರಿ ಮತ್ತು ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ರೇಷ್ಮೆ ಗೂಡು ಉತ್ಪಾದನೆ ತೃಪ್ತಿಕರವಾಗಿದ್ದು, ಈ ಭಾಗದಲ್ಲಿ ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದನೆಗಾಗಿ ಸ್ವಯಂ ಚಾಲಿತ ರೀಲಿಂಗ್ ಘಟಕಗಳ ಸ್ಥಾಪನೆಗೆ ಒತ್ತು ನೀಡಲು ಈ ಭಾಗದಲ್ಲಿ ಅಳವಡಿಸಲಾಗುವ ಸ್ವಯಂ ಚಾಲಿತ ರೀಲಿಂಗ್ ಘಟಕಗಳಿಂದ ಉತ್ಪಾದಿಸುವ ಕಚ್ಚಾ ರೇಷ್ಮೆಗೆ 5 ವರ್ಷಗಳವರೆಗೆ ಪ್ರೋತ್ಸಾಹಧನ ನೀಡಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ತೋಇ 219 ರೇಕೃವಿ 2015,**
**ಬೆಂಗಳೂರು, ದಿನಾಂಕ : 20-08-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ರಾಜ್ಯದ ದಕ್ಷಿಣ ಭಾಗದ ಸಾಂಪ್ರದಾಯಕ ರೇಷ್ಮೆ ಜಿಲ್ಲೆಗಳಲ್ಲಿ ಸ್ವಯಂ ಚಾಲಿತ ರೀಲಿಂಗ್ ಘಟಕಗಳಲ್ಲಿ ಉತ್ಪಾದಿಸುವ ಕಚ್ಚಾ ರೇಷ್ಮೆಗೆ ಸ್ವಯಂ ಚಾಲಿತ ರೀಲಿಂಗ್ ಘಟಕ ಸ್ಥಾಪನೆಯಿಂದ 3 ವರ್ಷಗಳವರೆಗೆ ಮಾತ್ರ ಪ್ರೋತ್ಸಾಹಧನ ನೀಡಲು, ಹಾಗೂ ಅಸಾಂಪ್ರದಾಯಕ ನೂತನ ರೇಷ್ಮೆ ಜಿಲ್ಲೆಗಳಾದ ಚಿತ್ರದುರ್ಗ, ಬಳ್ಳಾರಿ ಮತ್ತು ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ರೇಷ್ಮೆ ಗೂಡು ಉತ್ಪಾದನೆ ತೃಪ್ತಿಕರವಾಗಿದ್ದು, ಈ ಭಾಗದಲ್ಲಿ ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದನೆಗಾಗಿ ಸ್ವಯಂ ಚಾಲಿತ ರೀಲಿಂಗ್ ಘಟಕಗಳ ಸ್ಥಾಪನೆಗೆ ಒತ್ತು ನೀಡಲು ಈ ಭಾಗದಲ್ಲಿ ಅಳವಡಿಸಲಾಗುವ ಸ್ವಯಂ ಚಾಲಿತ ರೀಲಿಂಗ್ ಘಟಕಗಳಿಂದ ಉತ್ಪಾದಿಸುವ ಕಚ್ಚಾ ರೇಷ್ಮೆಗೆ 5 ವರ್ಷಗಳವರೆಗೆ ಪ್ರೋತ್ಸಾಹಧನ ನೀಡಲು ಸರ್ಕಾರವು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 330 ವೆಚ್ಚ-4/2016, ದಿನಾಂಕ 02-07-2016ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಆರ್. ಎಲ್. ಚಿನ್ನಮ್ಮ 20/8
(ಆರ್.ಎಲ್. ಚಿನ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ)
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ) ಕರ್ನಾಟಕ, ಬೆಂಗಳೂರು.
2. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.